ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಮ್.ನ್ಯಾಯಾಲಯ, ಉಡುಪಿ.

ಸಿ.ಸಿ. ನಂ**. 893/2024**

ಪಡುಬಿದ್ರಿ ಪೋಲೀಸ್ ಠಾಣೆ ..... ಪಿರ್ಯಾದಿದಾರರು

ಮತ್ತು

ಮಹಮ್ಮದ್ ಶಫೀಕ್ ಬಿನ್ ಲೇಟ್ ಮೊಯಿದ್ದಿನ್ ಬೇರಿ,
ಪ್ರಾಯಃ 55 ವರ್ಷ,
ವಾಸಃ ಕಣ್ಣಂಗಾರು ,
ನಡ್ಸಾಲು ಗ್ರಾಮ,
ಕಾಪು ತಾಲ್ಲೂಕು, ಉಡುಪಿ. …… ಆರೋಪಿ

<u>ಆಪಾದನೆ</u>

**ಪಿ.ಆರ್. ಯೋಗೇಶ್**, ಬಿ.ಕಾಂ. ಎಲ್.ಎಲ್.ಬಿ., ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ, ಆದ ನಾನು ಮೇಲ್ಕಾಣಿಸಿದ ಆರೋಪಿತರಾದ ನಿಮ್ಮ ಮೇಲೆ ಹೊರಿಸುವ ಆಪಾದನೆ ಏನೆಂದರೆಃ

ದಿನಾಂಕ 20.09.2022 ರಂದು ಸಂಜೆ 6.30 ರ ಸಮಯದಲ್ಲಿ ಚಾ.ಸಾ.1 ರವರು, ಚಾ.ಸಾ.2 ರಿಂದ 4 ರವರೊಂದಿಗೆ ಚಾ.ಸಾ.7 ರಿಂದ 11 ರವರ ಸಮಕ್ಷಮದಲ್ಲಿ ಕಾಪು ತಾಲ್ಲೂಕು, ನಡ್ಸಾಲು ಗ್ರಾಮದ ಕಣ್ಣಂಗಾರ್ ನಲ್ಲಿರುವ ಮನೆ ಸಂಖ್ಯೆ 4-1/1 ರ ಎದುರಿಗಿರುವ ಆರೋಪಿಯವರಾದ ನಿಮಗೆ ಸೇರಿದ ಗೋದಾಮ್ ನ್ನು ಪರಿಶೀಲಿಸಿದಾಗ ಅನ್ನ ಭಾಗ್ಯ ಯೋಜನೆಯಡಿಯಲ್ಲಿ ಸರ್ಕಾರದಿಂದ ಸಾರ್ವಜನಿಕರಿಗೆ ವಿತರಿಸುವ ಸುಮಾರು 13,073 ಕೆ.ಜಿ. ಬಿಳಿ ಹಾಗೂ ಕುಚ್ಚಲಕ್ಕಿಯನ್ನು ಹೆಚ್ಚಿ ನ ಬೆಲೆಗೆ ಮಾರಾಟ ಮಾಡುವ ಉದ್ದೇಶದಿಂದ ಆರೋಪಿಯವರಾದ ನೀವು ಕಾನೂನು ಬಾಹಿರವಾಗಿ ದಾಸ್ತಾನು ಮಾಡಿರುವ ಮೂಲಕ ಅಗತ್ಯ ವಸ್ತುಗಳ ಕಾಯ್ದೆಯ ಕಲಂ 3 ಮತ್ತು 7 ಹಾಗೂ ಕರ್ನಾಟಕ ಸಾರ್ವಜನಿಕ ವಿತರಣೆ ಹಾಗೂ ನಿಯಂತ್ರಣ ಆದೇಶದ ಕಲಂ 3(2), 18(1) ರ ರೀತಿಯ ಅಪರಾಧವನ್ನು ಮಾಡಿರುತ್ತೀರಿ ಎಂದಜು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆ 1ಃ ನಿಮಗೆ ಓದಿ ವಿವರಿಸಿದ ಆಪಾದನೆಯು ತಿಳಿಯಿತೇ?

ಉತ್ತರಃ

ಪ್ರಶ್ನೆ 2 ಃ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೇ?

ಉತ್ತರ ಃ

ಮೇಲಿನ ಆಪಾದನೆಯನ್ನು ಆರೋಪಿಯವರಿಗೆ ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಿದ್ದು ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ.

ದಿನಾಂಕ 25 ನೇ ದಿನ ಜುಲೈ ತಿಂಗಳು, 2024.

(ಪಿ.ಆರ್. ಯೋಗೇಶ್)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಸಿಜೆಎಂ, ಉಡುಪಿ.